## ದಿನಾಂಕ: 10-06-2011ರಂದು ಅಪರಾಹ್ನ: 12-05 ಗಂಟೆಗೆ ಹೊಯ್ಸಳ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಬಿ.ಆರ್.ಸತ್ಯನಾರಾಯಣ
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ

ಹಾಜರಿ:07 ಗೈರು ಹಾಜರಿ:00

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td></td><td>ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.</td><td></td></tr>
<tr><td>1</td><td>ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಗೆ ಸಂಬಂಧಿಸಿದ ಕ್ರಿಯಾ ಯೋಜನೆಗಳ ಅನುಮೋದನೆ ಬಗ್ಗೆ</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ(3) ಶಿಕ್ಷಣ ಮತ್ತು ಆರೋಗ್ಯ/ ಕ್ರಿಯೋ/32/2010-11 ದಿನಾಂಕ: 04-06-2011.<br><br>1. <u>ಸಾರ್ವಜನಿಕ ಶಿಕ್ಷಣ ಇಲಾಖೆ:</u><br>ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು 2011-12ನೇ ಸಾಲಿಗೆ ಇಲಾಖೆಯ ವಿವಿಧ ಯೋಜನೆಗಳಿಗೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಕೆಳಕಂಡಂತೆ ಸಭೆಗೆ ನೀಡಿದರು.<br>
<table>
<tr><th>ಕ್ರಸಂ</th><th>ಲೆಕ್ಕಶೀರ್ಷಿಕೆ/ಯೋಜನೆಯ ಹೆಸರು</th><th>ಮೊತ್ತ ರೂ.ಲಕ್ಷಗಳಲ್ಲಿ</th></tr>
<tr><td>1</td><td>2202-00-101-0-18<br>ಅಕ್ಷರ ದಾಸೋಹ</td><td>1436.00</td></tr>
<tr><td>2</td><td>2202-00-101-0-19<br>ಸರ್ವ ಶಿಕ್ಷಣ ಅಭಿಯಾನ</td><td>350.00</td></tr>
<tr><td>3</td><td>2202-00-101-0-40<br>ಗುತ್ತಿಗೆ ಆಧಾರದ ಶಿಕ್ಷಕರ ಸಂಭಾವಣೆ</td><td>2.00</td></tr>
<tr><td>4</td><td>2202-00-102-0-28<br>7 ವರ್ಷದಲ್ಲಿ ಅಸ್ತಿತ್ವದಲ್ಲಿ ಇರುವ ಖಾಸಗಿ ಪ್ರೌಢಶಾಲೆಗಳು</td><td>334.20</td></tr>
</table>
</td><td>ಸಭೆಯಲ್ಲಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ವ್ಯಾಪ್ತಿಗೆ ಬರುವ ಇಲಾಖೆಗಳ ಕ್ರಿಯಾ ಯೋಜನೆಗಳ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಸಾರ್ವಜನಿಕ ಶಿಕ್ಷಣ ಇಲಾಖೆಯ 2011-12ನೇ ಸಾಲಿನ ವಿವಿಧ ಯೋಜನೆಗಳಿಗೆ ಲಿಂಕ್ ಪುಸ್ತಕದಲ್ಲಿ ನಿಗದಿ ಪಡಿಸಿರುವ ಅನುದಾನಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸ ಲಾಯಿತು.<br><br>ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು ಕೋರಿರುವಂತೆ ಜಿಲ್ಲೆಯಲ್ಲಿ ತುಂಬಾ ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ತಾಂತ್ರಿಕ</td></tr>
</table>

| | | |
|---|---|---|
| 5 | 2202-00-102-0-29<br>ಪ್ರೌಢಶಾಲೆಗಳ ಕಟ್ಟಡ ನಿರ್ಮಾಣ (ನಬಾರ್ಡ್) | 114.13 |
| 6 | 2202-00-102-0-33<br>ಫೀಜಿನ ಮರುಪಾವತಿ | 60.00 |
| 7 | 2202-00-102-0-34<br>ಸೇರ್ಪಡೆ ಮತ್ತು ಮಾರ್ಪಾಡು | 30.00 |
| 8 | 2202-00-104-0-35<br>ಸಾಧನ ಸಾಮಗ್ರಿಗಳ ಸರಬರಾಜು | 16.00 |
| 9 | 2202-00-104-0-01<br>ಅಂಗವಿಕಲ ಮಕ್ಕಳ ಸಮಗ್ರ ಶಿಕ್ಷಣ | 10.00 |
| | **ಒಟ್ಟು** | **2352.330** |

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಆರ್.ಐ.ಡಿ.ಎಫ್ -15 ರಡಿಯಲ್ಲಿ ಜಿಲ್ಲೆಗೆ ಎಷ್ಟು ಕೊಠಡಿಗಳು ಮಂಜೂರಾಗಿದ್ದವು. ಅವುಗಳಲ್ಲಿ ಎಷ್ಟು ಕೊಠಡಿಗಳು ಪೂರ್ಣಗೊಂಡಿವೆ ಎಂಬ ಬಗ್ಗೆ ವಿವರಗಳನ್ನು ನೀಡಬೇಕೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸ್ವಾಮಿಗೌಡರವರು ಮಾತನಾಡುತ್ತಾ, ಕೆಲವು ಅನುದಾನಿತ ಶಾಲೆಗಳಲ್ಲಿ ಮಾಸಿಕ ಶುಲ್ಕವನ್ನು ಪಡೆಯುತ್ತಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಪರಿಶೀಲಿಸಿ ಅಂತಹ ಶಾಲೆಗಳ ಮೇಲೆ ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.

ಉಪ ನಿರ್ದೇಶಕರು ಉತ್ತರಿಸುತ್ತಾ, ಮಾನ್ಯ ಸದಸ್ಯರು ಅನುದಾನಿತ ಶಾಲೆಗಳು ಮಾಸಿಕ ಶುಲ್ಕವನ್ನು ವಿಧಿಸುತ್ತಿರುವ ಬಗ್ಗೆ ನಿಖರವಾಗಿ ಶಾಲೆಯ ವಿವರಗಳನ್ನು ನೀಡಿದಲ್ಲಿ ಅಂತಹ ಶಾಲೆಗಳ ಮೇಲೆ ಅಗತ್ಯ ಕ್ರಮ ವಹಿಸುವುದಾಗಿ ತಿಳಿಸಿದರು.

ಸಾಧನ ಸಾಮಗ್ರಿ ಸರಬರಾಜು ಯೋಜನೆಯಡಿ ಹಿಂದಿನ ವರ್ಷ ಯಾವ ಯಾವ ಶಾಲೆಗಳಿಗೆ ಸಾಧನ ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿತ್ತು ಎಂಬ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ವರದಿಯನ್ನು ಪಡೆದು ನಂತರ ಅವಶ್ಯವಿರುವ ಶಾಲೆಗಳಿಗೆ ಸಾಧನ ಸಾಮಗ್ರಿಗಳನ್ನು ವಿತರಣೆ ಮಾಡಲು ಕ್ರಮ ವಹಿಸುವಂತೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ವೇತನ ಸಕಾಲದಲ್ಲಿ ದೊರಕದೆ ಅವರುಗಳಿಗೆ ತೊಂದರೆಯಾಗುತ್ತಿದ್ದು, ಅವರಿಗೆ ವೇತನ ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ದೊರೆಯುವಂತೆ 26ನೇ ತಾರೀಖಿಗೇ ವೇತನ ಬಿಲ್ಲನ್ನು ಖಜಾನೆಗಳಿಗೆ ಕಳುಹಿಸಲು ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರಿಗೆ ತಿಳಿಸಿದರು.

ವರದಿ ಪಡೆದು ನಂತರ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಲಾಯಿತು.

ಉಪ ನಿರ್ದೇಶಕರು ಉತ್ತರಿಸುತ್ತಾ, ಪ್ರಾಥಮಿಕ ಶಾಲಾ ಶಿಕ್ಷಕರುಗಳ ವೇತನಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಅಧಿಕಾರಿಯವರು ಮೇಲುಸಹಿ ನೀಡುವುದು ತಡವಾಗುತ್ತಿದ್ದು, ಇದರಿಂದ, ಬಿಲ್ಲನ್ನು ಖಜಾನೆಗೆ ಕಳುಹಿಸಲು ವಿಳಂಬವಾಗುತ್ತಿದೆ. ಆದ್ದರಿಂದ, ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮೇಲುಸಹಿಯನ್ನು ಆದಷ್ಟು ತ್ವರಿತವಾಗಿ ನೀಡುವ ಬಗ್ಗೆ ನಿರ್ದೇಶನವನ್ನು ನೀಡಬೇಕೆಂದು ಕೋರಿದರು.

ಮುಂದುವರೆದು, ಆರ್.ಐ.ಡಿ.ಎಫ್-15ರ ಪ್ರೌಢಶಾಲಾ ಕಟ್ಟಡಗಳಿಗೆ ಸಂಬಂಧಿಸಿದಂತೆ, ಹಾಸನ ಮತ್ತು ಚನ್ನರಾಯಪಟ್ಟಣ ಇಂಜಿನಿಯರಿಂಗ್ ವಿಭಾಗಗಳ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ರಾಜ್ಯದಲ್ಲಿ ಹಾಸನ ಜಿಲ್ಲೆಯು 9ನೇ ಸ್ಥಾನವನ್ನು ಪಡೆದಿರುವ ಪ್ರಯುಕ್ತ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸಮಿತಿ ಸಭೆಯು ಅಭಿನಂದನೆಯನ್ನು ಸಲ್ಲಿಸಿತು.

ಮಾನ್ಯ ಸದಸ್ಯರಾದ ಶ್ರೀ ಅಮಿತ್‌ಕುಮಾರ್ ಶೆಟ್ಟಿರವರು ಮಾತನಾಡುತ್ತಾ, ಬೇಲೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರುಗಳು ಕೊಠಡಿಗಳನ್ನು ಕಳಪೆ ಗುಣಮಟ್ಟದಲ್ಲಿ ನಿರ್ಮಾಣ ಮಾಡುತ್ತಿದ್ದು, ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ವಹಿಸಬೇಕೆಂದು ಮತ್ತು ಶಾಲೆಗಳಲ್ಲಿರುವ ಶೌಚಾಲಯಗಳು ಸ್ವಚ್ಛವಾಗಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ಕೋರಿದರು.

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಬಹಳ ಹಿಂದೆ ನಿರ್ಮಿಸಲಾಗಿರುವ ಸರ್ಕಾರಿ ಶಾಲೆಗಳ ಕಟ್ಟಡಗಳು ತುಂಬಾ ಶಿಥಿಲಗೊಂಡಿದ್ದು, ಬೀಳುವ ಸ್ಥಿತಿಯಲ್ಲಿರುವುದರಿಂದ, ಅವುಗಳನ್ನು ಕೆಡವಲು ಅನುಮತಿ ನೀಡಬೇಕೆಂದು ಕೋರಿದರು.

2. <u>ವಯಸ್ಕರ ಶಿಕ್ಷಣ ಇಲಾಖೆ:</u>

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಸಾಕ್ಷರತಾ ಸಮಿತಿ, ಹಾಸನ ಇವರು 2011-12ನೇ ಸಾಲಿಗೆ ಇಲಾಖೆಯ ಯೋಜನೆಗೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಕೆಳಕಂಡಂತೆ

| ಕ್ರಸಂ | ಲೆಕ್ಕಶೀರ್ಷಿಕೆ/ಯೋಜನೆಯ ಹೆಸರು | ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | 2202-00-104-0-37<br>ಜನ ಶಿಕ್ಷಣ ನಿಲಯ -ಸಾಮಾನ್ಯ ವೆಚ್ಚಗಳು | 10.00 |

ವಯಸ್ಕರ ಶಿಕ್ಷಣ ಇಲಾಖೆಯ 2011-12ನೇ ಸಾಲಿಗೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯವರು ಮಾತನಾಡುತ್ತಾ, 2011–12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ರೂ.10.00ಲಕ್ಷಗಳ ಅನುದಾನವನ್ನು ನಿಗದಿಪಡಿಸಿದೆ. ಹಾಸನ ಜಿಲ್ಲೆಯಲ್ಲಿ 37 ಕೇಂದ್ರಗಳಲ್ಲಿ ವೃತ್ತಿ ಕೌಶಲ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಊದುಬತ್ತಿ, ಮೇಣದಬತ್ತಿ ಮುಂತಾದವುಗಳನ್ನು ತಯಾರಿಸಲು ತರಬೇತಿಯನ್ನು ನೀಡಲಾಗುತ್ತಿದೆ. 2 ತಿಂಗಳು ನಿರುದ್ಯೋಗಿ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿರುವ ನಿರಕ್ಷರಿಗಳಿಗೆ ಅಕ್ಷರ ಕಲಿಸಲು ಉದ್ದೇಶಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಕೆಲಸ ನಿರ್ವಹಿಸುವ ಪ್ರೇರಕರಿಗೆ ಮಾಹೆಯಾನ ರೂ.500/–ಗಳ ಪ್ರೋತ್ಸಾಹಧನವನ್ನು ಗ್ರಾಮ ಪಂಚಾಯಿತಿಗಳಿಗೆ ಜಿಲ್ಲಾ ಪಂಚಾಯಿತಿಯಿಂದ ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಿರುವ ತಲಾನುದಾನ ರೂ.25000/–ಗಳಲ್ಲಿ ನೀಡುವಂತೆ ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನವನ್ನು ನೀಡಬೇಕೆಂದು ಕೋರಿದರು.

ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಹೊಸದಾಗಿ ಆಯ್ಕೆಯಾಗಿರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಅನಕ್ಷರಸ್ಥ ಸದಸ್ಯರುಗಳಿಗೆ ಅಕ್ಷರ ಕಲಿಸಲು ಆದ್ಯತೆ ಮೇಲೆ ಕ್ರಮ ವಹಿಸಬೇಕೆಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯವರಿಗೆ ತಿಳಿಸಿದರು.

3. **ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ:**

ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಹಾಸನ ಇವರು 2011–12ನೇ ಸಾಲಿಗೆ ಇಲಾಖೆಯ ವಿವಿಧ ಯೋಜನೆಗಳಿಗೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ನೀಡಿದರು.

| ಕ್ರಸಂ | ಲೆಕ್ಕಶೀರ್ಷಿಕೆ/ಯೋಜನೆಯ ಹೆಸರು | ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | 2205–00–104–0–26–051<br>ಕ್ರೀಡಾ ಕೂಟ ಮತ್ತು ರ್‍ಯಾಲಿಗಳ ಸಂಘಟನೆ, ಪ್ರಯಾಣ ಭತ್ಯೆ ಮತ್ತು ದಿನಭತ್ಯೆ | 11.00 |
| 2 | 2205–00–104–0–28– 141<br>ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ | 5.00 |
| 3 | 2205–00–104–0–30–100<br>ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿಗಾರರಿಗೆ ಆರ್ಥಿಕ ನೆರವು | 6.00 |

ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ 2011–12ನೇ ಸಾಲಿನ ವಿವಿಧ ಯೋಜನೆಗಳಿಗೆ ಲಿಂಕ್ ಪುಸ್ತಕದಲ್ಲಿ ನಿಗದಿ ಪಡಿಸಿರುವ ಅನುದಾನಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

| | | |
|---|---|---|
| 4 | 2205-00-104-02-29-051<br>ಕ್ರೀಡಾಶಾಲೆಗಳು | 5.00 |
| 5 | 2205-00-104-0-31-051<br>ಗ್ರಾಮೀಣ ಕ್ರೀಡಾ ಕೇಂದ್ರಗಳು | 5.00 |
| 6 | 2205-00-104-0-01-051<br>ಪಂಚಾಯತ್ ಯುವ ಕ್ರೀಡಾ ಹಾಗೂ ಖೇಲ್ ಅಭಿಯಾನ್ ಯೋಜನೆ | 35.00 |
| | ಒಟ್ಟು | **67.00** |

ಸಹಾಯಕ ನಿರ್ದೇಶಕರು, ಮಾತನಾಡುತ್ತಾ, ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಒಳಾಂಗಣ ಕ್ರೀಡಾಂಗಣದಲ್ಲಿ ಈಜನ್ನು ಹೊರತುಪಡಿಸಿ 3 ಆಟಗಳಿಗೆ ಮೂರು ತಿಂಗಳಿಗೆ ರೂ.1800/-ಗಳನ್ನು ನೀಡಿ ಸದಸ್ಯರಾಗಬಹುದೆಂದು ವಿವರ ನೀಡಿದರು. ಜಿಲ್ಲೆಯಲ್ಲಿರುವ ಕ್ರೀಡಾ ವಸತಿ ಶಾಲೆಗೆ ಹಾಕಿ ಕ್ರೀಡೆಯಲ್ಲಿ ತರಬೇತಿಯನ್ನು ನೀಡಲಾಗುತ್ತಿದ್ದು, ಪ್ರಸಕ್ತ ಸಾಲಿಗೆ ಕ್ರೀಡಾ ವಸತಿ ಶಾಲೆಯಲ್ಲಿ ಸ್ಥಳಾವಕಾಶವಿದ್ದು, ಅರ್ಹ ವಿದ್ಯಾರ್ಥಿನಿಯರು ಸಿಗುತ್ತಿಲ್ಲ. ಆದ್ದರಿಂದ, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ 150 ಸೆ.ಮೀ ಉದ್ದವಿರುವ ಮತ್ತು ಕ್ರೀಡೆಯಲ್ಲಿ ಆಸಕ್ತಿಯಿರುವ ಅರ್ಹ ವಿದ್ಯಾರ್ಥಿನಿಯರು ಇದ್ದಲ್ಲಿ ಕಳುಹಿಸಿಕೊಡಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಕೋರಿದರು.

ಮುಂದುವರೆದು, ಕೇಂದ್ರಸರ್ಕಾರದಿಂದ ಪೈಕಾಸ್ ಯೋಜನೆಯಡಿ ಜಿಲ್ಲೆಗೆ ರೂ.35.00ಲಕ್ಷಗಳನ್ನು ಮಂಜೂರು ಮಾಡಿದ್ದು, ಸದರಿ ಅನುದಾನದಲ್ಲಿ ಪ್ರತಿ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಶಾಲೆಯ ಕ್ರೀಡಾ ಮೈದಾನವನ್ನು ಸಮತಟ್ಟು ಮತ್ತು ವಿವಿಧ ಆಟಗಳ ಕೋರ್ಟ್‌ಗಳನ್ನು ನಿರ್ಮಿಸಲು ಅವಕಾಶವಿದ್ದು, ಕನಿಷ್ಟ 2 ಎಕರೆ ಭೂಮಿಯಿರುವ ಶಾಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಬಹುದಾಗಿದೆ ಎಂದು ಸಭೆಗೆ ವಿವರ ನೀಡಿದರು.

ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡುತ್ತಾ, ಶಾಲಾ ಮೈದಾನಗಳನ್ನು ಆಯ್ಕೆ ಮಾಡುವಾಗ ಮತ್ತು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ಸಾಮಗ್ರಿಗಳನ್ನು ಖರೀದಿಸುವ ಸಂದರ್ಭದಲ್ಲಿ ಮತ್ತು ಶಾಲೆಗಳಿಗೆ ಸಹಾಯಧನ ನೀಡುವ ಸಂದರ್ಭದಲ್ಲಿ ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರ ಗಮನಕ್ಕೆ ತಂದು

ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕ್ರಮ ವಹಿಸಬೇಕೆಂದು ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಹಾಸನ ಇವರಿಗೆ ತಿಳಿಸಿದರು.

4. **ಆರೋಗ್ಯ ಇಲಾಖೆ:**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, 2011-12ನೇ ಸಾಲಿಗೆ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಕೆಳಕಂಡಂತೆ ವಿವರಗಳನ್ನು ನೀಡಿದರು.

| ಕ್ರಸಂ | ಲೆಕ್ಕಶೀರ್ಷಿಕೆ/ಯೋಜನೆಯ ಹೆಸರು | ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | 2210-03-101-0-36<br>ಇಲಾಖೆ ಕಟ್ಟಡಗಳ ನಿರ್ವಹಣೆ | 30.00 |
| 2 | 2210-00-101-0-27<br>ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ | 108.00 |
| 3 | 2210-03-110-0-73<br>ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆ | 170.00 |
| 4 | 2210-00-102-0-40<br>ಆಸ್ಪತ್ರೆಗಳ ಸಲಕರಣೆಗಳ ದುರಸ್ಥಿ | 8.00 |
| 5 | 2210-00-103-0-45<br>ತಾಲ್ಲೂಕು ಆಸ್ಪತ್ರೆಗಳಿಗೆ ಕ್ಷ-ಕಿರಣ ಸೌಲಭ್ಯ | 12.00 |
| 6 | 2210-00-103-0-47<br>ರಕ್ತ ನಿಧಿ ಸ್ಥಾಪನೆ | 3.00 |
| | ಒಟ್ಟು | **331.03** |
| | ಕುಟುಂಬ ಕಲ್ಯಾಣ ಕಾರ್ಯಕ್ರಮ-2010 | |
| 1 | 2210-00-106-0-48<br>ರಾಜ್ಯ ಆರೋಗ್ಯ ಸಾರಿಗೆ ಸಂಸ್ಥೆ | 40.00 |
| 2 | 2210-00-106-0-53<br>ಪಲ್ಸ್ ಪೋಲಿಯೋ ಕಾರ್ಯಕ್ರಮ | 3.00 |

ಆರೋಗ್ಯ ಇಲಾಖೆಯ 2011-12ನೇ ಸಾಲಿನ ವಿವಿಧ ಯೋಜನೆಗಳಿಗೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

| | | |
|---|---|---|
| 3 | 2210-00-106-0-01<br>ಜಿಲ್ಲಾ ಕುಟುಂಬ ಕಲ್ಯಾಣ ವಿಭಾಗ | - |
| 4 | 2210-00-106-0-02<br>ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗ್ರಾಮಾಂತರ ಕುಟುಂಬ ಕಲ್ಯಾಣ | - |
| 5 | 2210-00-106-0-03<br>ಕುಟುಂಬ ಕಲ್ಯಾಣ ಗ್ರಾಮಾಂತರ ಉಪ ಕೇಂದ್ರಗಳು | - |
| 6 | 2210-00-106-0-04<br>ಕರುಣಾ ಟ್ರಸ್ಟ್ ಸಹಾಯಧನ | - |
| | ಒಟ್ಟು | 43.00 |

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಆರೋಗ್ಯ ಇಲಾಖೆಯಡಿ ಕಟ್ಟಡಗಳ ದುರಸ್ಥಿ ಯೋಜನೆಯಡಿ ನಿಗದಿಯಾಗಿರುವ ಅನುದಾನದಲ್ಲಿ ತುಂಬಾ ಅವಶ್ಯವಿರುವ ಕಟ್ಟಡಗಳ ದುರಸ್ಥಿಪಡಿಸಲು ವಿನಿಯೋಗಿಸಬೇಕೆಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ ವೈದ್ಯರ ಕೊರತೆ ಬಹಳವಿದ್ದು, ಎಂ.ಬಿ.ಬಿ.ಎಸ್ ವ್ಯಾಸಂಗ ಮಾಡಿರುವ ವೈದ್ಯರು ಬಂದಲ್ಲಿ ಅವರಿಗೆ ಮಾಹೆಯಾನ ರೂ.50000/-ಗಳ ವೇತನವನ್ನು ನೀಡಲಾಗುವುದು. ಆದರೆ, ವೈದ್ಯರು ದೊರಕುತ್ತಿಲ್ಲವೆಂದು ಸಭೆಗೆ ವಿವರ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಅಮಿತ್ ಕುಮಾರ್ ಶೆಟ್ಟರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕಿನ ಯಸಳೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಯುಷ್ ವೈದ್ಯಾಧಿಕಾರಿಯವರನ್ನು ಬಿಡುಗಡೆ ಮಾಡಿದ್ದು, ಅವರಿಗೆ ಬೇರೆ ಕಡೆ ಕರ್ತವ್ಯಕ್ಕೆ ಸ್ಥಳ ನಿಯುಕ್ತಿ ಮಾಡಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉತ್ತರಿಸುತ್ತಾ, ಘನ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ ಎಂ.ಬಿ.ಬಿ.ಎಸ್ ವೈದ್ಯರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆಯುಷ್ ವೈದ್ಯಾಧಿಕಾರಿಯವರನ್ನು ಹಿಂಪಡೆಯಲಾಗಿದ್ದು, ಸದರಿಯವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಕಛೇರಿಗೆ ಹಿಂದಿರುಗಿದ್ದು, ಮುಂದೆ ಕ್ರಮ ವಹಿಸಲಾಗುವುದು ಎಂದು ಸಭೆಗೆ ವಿವರ ನೀಡಿದರು.

5. **ಆಯುಷ್ ಇಲಾಖೆ:**

ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು 2011-12ನೇ ಸಾಲಿಗೆ ಇಲಾಖೆಯ ವಿವಿಧ ಯೋಜನೆಗಳಿಗೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ನೀಡಿದರು.

| ಕ್ರಸಂ | ಲೆಕ್ಕಶೀರ್ಷಿಕೆ/ಯೋಜನೆಯ ಹೆಸರು | ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | 2210-00-101-0-35<br>ಭಾರತೀಯ ವೈದ್ಯಕೀಯ ಪದ್ಧತಿ ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯಾನುದಾನ | 5.00 |
| 2 | 2210-00-105-0-38<br>ಕಟ್ಟಡಗಳು | 15.00 |
| | ಒಟ್ಟು | 20.00 |

ಆಯುಷ್ ಇಲಾಖೆಯ ಕಟ್ಟಡಗಳು ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೂಕು ಅಬ್ಬೂರು ಮಾಚಗೌಡನಹಳ್ಳಿಯಲ್ಲಿ ಸ್ವಂತ ಕಟ್ಟಡ ಇರುವುದಿಲ್ಲ. ಆದ್ದರಿಂದ, ರೂ.12.00ಲಕ್ಷಗಳ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಾಣದ ಪ್ರಸ್ತಾಪ ಮಾಡಲಾಗಿದ್ದು, ಉಳಿದ ಅನುದಾನಕ್ಕೆ ದುರಸ್ಥಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಹೇಮಾವತಿ ಮಂಜುನಾಥ್‌ರವರು ಮಾತನಾಡುತ್ತಾ, ಬೇಲೂರು ತಾಲ್ಲೂಕು ಸಾಣೇನಹಳ್ಳಿಯಲ್ಲಿರುವ ಆಯುಷ್ ಚಿಕಿತ್ಸಾ ಕೇಂದ್ರದ ಕಟ್ಟಡವೂ ಸಹ ತುಂಬಾ ಹಳೆಯದಾಗಿದ್ದು, ಸದರಿ ಗ್ರಾಮದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸುವುದು ಅಗತ್ಯವೆಂದು ತಿಳಿಸುತ್ತಾ, ಅರಕಲಗೂಡು ತಾಲ್ಲೂಕು ಅಬ್ಬೂರು ಮಾಚಗೌಡನಹಳ್ಳಿಗೆ ನಿಗದಿಪಡಿಸಿರುವ ರೂ.12.00ಲಕ್ಷಗಳ ಅನುದಾನದಲ್ಲಿ ವಿಂಗಡಿಸಿ ಪ್ರಸಕ್ತ ಸಾಲಿಗೆ ರೂ.6.00ಲಕ್ಷಗಳಂತೆ ಎರಡೂ ಆಯುಷ್ ಚಿಕಿತ್ಸಾ ಕೇಂದ್ರ ಕಟ್ಟಡಗಳಿಗೆ ನೀಡಲು ಕ್ರಮ ವಹಿಸಬೇಕೆಂದು ಕೋರಿದರು.

ಆಯುಷ್ ಇಲಾಖೆಯಡಿ ಕಟ್ಟಡಗಳು ಯೋಜನೆಯಡಿ ಹೊಸ ಕಟ್ಟಡ ನಿರ್ಮಾಣದ ಪ್ರಸ್ತಾವನೆಯನ್ನು ಬದಲಾವಣೆ ಮಾಡಿ ಪ್ರಸಕ್ತ ಸಾಲಿಗೆ ಅರಕಲಗೂಡು ತಾ: ಅಬ್ಬೂರು ಮಾಚಗೌಡನಹಳ್ಳಿ ಮತ್ತು ಬೇಲೂರು ತಾಲ್ಲೂಕು ಸಾಣೇನಹಳ್ಳಿ ಗ್ರಾಮದಲ್ಲಿ ಈ ಎರಡೂ ಗ್ರಾಮಗಳಲ್ಲಿರುವ ಆಯುಷ್ ಚಿಕಿತ್ಸಾ ಕೇಂದ್ರಗಳ ಕಟ್ಟಡಗಳನ್ನು ಹೊಸದಾಗಿ ನಿರ್ಮಾಣ ಮಾಡಲು ಪೂರ್ಣ ಪ್ರಮಾಣದಲ್ಲಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಪ್ರಸಕ್ತ ಸಾಲಿಗೆ ರೂ.6.00ಲಕ್ಷಗಳಂತೆ ವಿನಿಯೋಗ ಮಾಡಿ ಬಾಕಿ ಅನುದಾನವನ್ನು ಮುಂದಿನ ಸಾಲಿನ ಅನುದಾನದಲ್ಲಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

6. **ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ:**

ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಕುಡಿಯುವ ನೀರಿನ ಯೋಜನೆಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿದೆ. ಅದರಲ್ಲಿ 2010-11ನೇ ಸಾಲಿಗೆ ರೂ.13.00ಕೋಟಿಗಳ ಮುಂದುವರೆದ ಕಾಮಗಾರಿಗಳಿದ್ದು, ರೂ.18.60ಕೋಟಿ ಅನುದಾನಕ್ಕೆ ಹೊಸ ಕಾಮಗಾರಿಗಳ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು.

| | | | |
|---|---|---|---|
| | | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲದಿರುವ ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಕೋರಿದರು.<br>ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಎಷ್ಟು ಶಾಲೆಗಳಿಗೆ ಬೇಕಾದರೂ ಸಹ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಅವಕಾಶವಿದ್ದು, ಶಾಲೆಗಳ ಪಟ್ಟಿಯನ್ನು ನೀಡಿದಲ್ಲಿ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗುವುದು ಎಂದು ವಿವರ ನೀಡಿದರು. | |
| 2 | 2011-12ನೇ ಸಾಲಿಗೆ ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆ, ಹಾಸನ ಇಲ್ಲಿ ದಾಖಲಾಗುವ ಒಳರೋಗಿಗಳ ಕೊಳೆ ಬಟ್ಟೆಗಳನ್ನು ಶುಚಿಗೊಳಿಸಲು ಅನುಮತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(4)7-ಆರೋಗ್ಯ/2011-12 ದಿನಾಂಕ: 30-04-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆ, ಹಾಸನ ಇಲ್ಲಿಗೆ 2011-12ನೇ ಸಾಲಿನಲ್ಲಿ ದಾಖಲಾಗುವ ಒಳರೋಗಿಗಳ ಕೊಳೆ ಬಟ್ಟೆಗಳನ್ನು ತೊಳೆದು ಇಸ್ತ್ರಿ ಮಾಡಲು ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು ದರಪಟ್ಟಿ ಕರೆದು, ದರಪಟ್ಟಿ ಸಲ್ಲಿಸಿದ 4 ಸಂಸ್ಥೆಗಳ ಪೈಕಿ ಕಡಿಮೆ ದರ ಸೂಚಿಸಿದ ಮೆ: ವೆಂಕಟೇಶ್, ಹೆಚ್.ಡಿ.ವಾಷಿಂಗ್ ಲಾಂಡ್ರಿ, ಬಸವೇಶ್ವರ ಕಲ್ಯಾಣ ಮಂಟಪದ ಪಕ್ಕ, ಪೆನ್‌ಷನ್ ಮೊಹಲ್ಲಾ, ಹಾಸನ ಇವರಿಂದ ಒಳರೋಗಿಗಳ ಕೊಳೆ ಬಟ್ಟೆಗಳನ್ನು ತೊಳೆದು ಇಸ್ತ್ರಿ ಮಾಡಿಸಲು ಮಂಜೂರಾತಿ ನೀಡುವಂತೆ ಕೋರಿ ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು ಉಲ್ಲೇಖದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು ಕೋರಿರುವಂತೆ, ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆ, ಹಾಸನ ಇಲ್ಲಿಗೆ 2011-12ನೇ ಸಾಲಿನಲ್ಲಿ ದಾಖಲಾಗುವ ಒಳರೋಗಿಗಳ ಕೊಳೆ ಬಟ್ಟೆಗಳನ್ನು ಕಡಿಮೆ ದರ ನಮೂದಿಸಿರುವ ಮೆ: ವೆಂಕಟೇಶ್, ಹೆಚ್.ಡಿ.ವಾಷಿಂಗ್ ಲಾಂಡ್ರಿ, ಬಸವೇಶ್ವರ ಕಲ್ಯಾಣ ಮಂಟಪದ ಪಕ್ಕ, ಪೆನ್‌ಷನ್ ಮೊಹಲ್ಲಾ, ಹಾಸನ ಇವರಿಂದ ತೊಳೆದು ಇಸ್ತ್ರಿ ಮಾಡಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | ಮತ್ತಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | | |

B. R. Saty...

(ಬಿ.ಆರ್.ಸತ್ಯನಾರಾಯಣ)
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ